# ಬೋರ್ಡಿಂಗ್ ಸ್ಕೂಲ್ ಬೇಬಿಯ ಕಾಮಿಡಿ

ಹಣೆ ಮೇಲೆ ಢಾಳು ವಿಭೂತಿ. ನಡುವೆ ಕುಂಕುಮ. ತುಂಬುಕೆನ್ನೆ. 'ಫ್ಯಾಮಿಲಿ ಪ್ಯಾಕ್' ಎಂದು ಅವರೇ ತಮಾಷೆ ಮಾಡಿಕೊಳ್ಳುವ ಹೊಟ್ಟೆ. ಮುಖದ ತುಂಬಾ ಸಂಕೋಚ– ಮೊದಲ ನೋಟಕ್ಕೆ ಹೀಗೆ ಪ್ರಕಟಗೊಳ್ಳುವ ನಟ ಕಾರಿನಿಂದ ಇಳಿದದ್ದೇ ಸರಸರನೆ ಹೋಟೆಲ್‌ನತ್ತ ಹೆಜ್ಜೆ ಹಾಕಿದರು. ಹಾದಿಯಲ್ಲಿ ಯಾರೂ ಅಭಿಮಾನಿಗಳು ಎದುರಾಗದಿರಲಿ ಎಂದು ಇಷ್ಟದೇವರಲ್ಲಿ ಮೊರೆಇಡುತ್ತಲೇ ಇದ್ದರು.

ಹೋಟೆಲ್ ಒಳಹೊಕ್ಕಿದ್ದೇ ವೇಟರ್ 'ಸಾರ್, ನಾನು ನಿಮ್ಮ ಫ್ಯಾನ್' ಅಂದರು. 'ಅಯ್ಯೋ, ಫ್ಯಾನ್ ಆಫ್ ಮಾಡಪ್ಪ' ಎಂದು ಚಟಾಕಿ ಹಾರಿಸಿದ ನಟನನ್ನು ಹೋಟೆಲ್ ಸಿಬ್ಬಂದಿ ಸುಮ್ಮನೆ ಬಿಟ್ಟಾರೇ. ಒಬ್ಬೊಬ್ಬರಾಗಿ ಅವರ ಬಳಿಗೆ ಬಂದು, ವಿಶೇಷ ಸತ್ಕಾರ ಮಾಡುವವರಂತೆ ನಿಂತರು. ಯಾವುದನ್ನು ನಟ ಬಯಸಿರಲಿಲ್ಲವೋ ಅಂಥ ವಾತಾವರಣ ಅಲ್ಲಿ ಸೃಷ್ಟಿಯಾಯಿತು. 'ಪ್ಲೀಸ್, ನಮ್ಮನ್ನು ಬಿಟ್ಟುಬಿಡಿ... ಆಮೇಲೆ ನಿಮಗೆಲ್ಲಾ ಕಾಮಿಡಿ ಮಾಡ್ತೀನಿ' ಎಂದರಷ್ಟೆ. 'ನಿಮಗೆ ಯಾವ ಹಾಡು ಇಷ್ಟ ಸಾ', 'ನಿಮ್ಮದೇ ಪಿಕ್ಚರ್‌ನ ಹಾಡು ಹಾಕಿದೀವಿ ಕೇಳಿ ಸಾ', 'ಏನ್ ಟೈಮಿಂಗ್ ಸಾ ಆ ಪಿಕ್ಚರ್‌ನಲ್ಲಿ ನಿಮ್ದು'– ಹೀಗೆ ಬಗೆಬಗೆಯ ಪ್ರತಿಕ್ರಿಯೆಗಳೂ ಬಂದವು.

ಮುಜುಗರಕ್ಕೆ ಒಳಗಾದಂತೆ ಕಂಡ ನಟ ಹೇಳುತ್ತಾ ಹೋದರು: 'ಇವೆಲ್ಲಾ ನನಗೆ ಆಗೋಲ್ಲ. ನನ್ನ ಅಣ್ಣ ಇವನ್ನೆಲ್ಲಾ ಚೆನ್ನಾಗಿ ಹ್ಯಾಂಡಲ್ ಮಾಡ್ತಾರೆ. ಯಾರು ಯಾವ ಫಂಕ್ಷನ್‌ಗೆ ಕರೆದರೂ ನಾನು ಹೋಗೋಲ್ಲ. ಅವರು ಬಯ್ತಾರೆ. ಜನರ ಜೊತೆ ಬೆರೆತರಷ್ಟೇ ನಟರಿಗೆ ಮರ್ಯಾದೆ ಅಂತಾರೆ. ನಾನು ಬೋರ್ಡಿಂಗ್ ಸ್ಕೂಲ್ ಬೇಬಿ. ಮೊದಲಿನಿಂದಲೂ ಚಿಪ್ಪಿನೊಳಗೇ ಇದ್ದವನು. ಈಗ ಎಕ್ಸ್‌ಪೋಷರ್. ಭಯವಾಗುತ್ತೆ. ಏನು ಕಾಮಿಡಿ ಮಾಡುವುದೋ... ತಮಿಳಿನದ್ದು ಎರಡು, ತೆಲುಗಿನದ್ದು ಮೂರು ಕದ್ದು ಇಲ್ಲಿಯವರು ಇನ್ನೊಂದು ಮಾಡುತ್ತಾರೆ. ಕೆಲವೊಮ್ಮೆ ಯಾಕಾದರೂ ಈ ಫೀಲ್ಡಿಗೆ ಬಂದ್ನೋ ಅನ್ನಿಸುತ್ತೆ. ಜನ ಇಷ್ಟಪಟ್ಟಾಗ ಆತ್ಮವಿಶ್ವಾಸ ಬರುತ್ತೆ. ನಿಜಕ್ಕೂ ಇದು ಮಾಯಾ ಲೋಕ'.

ಅಣ್ಣನ ನೆರಳಿನಲ್ಲೇ ಚಿತ್ರರಂಗ ಪ್ರವೇಶಿಸಿದರೂ ಅದರಿಂದ ನಿಧಾನವಾಗಿ ಹೊರಬಂದು ತಮ್ಮದೇ ಇಮೇಜು ಕಟ್ಟಿಕೊಂಡ ಆ ನಟ ಸಂಕೋಚದ ಮುದ್ದೆ. ಫೋನ್‌ಗೆ ಸಲೀಸಾಗಿ ಸಿಗುವ ಫ್ರೆಂಡ್. ಸಿನಿಮಾ ಅರ್ಥಶಾಸ್ತ್ರದ ಜೊತೆಗೆ ತತ್ವಶಾಸ್ತ್ರ ಬೆಸೆದು ಮಾತನಾಡಬಲ್ಲ ಪ್ರತಿಭೆ. 'ಯಾವುದಾದರೂ ಒಳ್ಳೆ ಪುಸ್ತಕ ಇದ್ದರೆ ಸಜೆಸ್ಟ್ ಮಾಡಿ' ಎಂದು ಪ್ರತಿ ಮಾತಿನ ನಡುವೆಯೂ ಅರ್ಜಿ ಹಾಕುತ್ತಾರೆ. 'ಕ್ರಿಟಿಕಲ್ ಆಗಿ ನನ್ನ ಬಗ್ಗೆ ಮಾತಾಡಿ' ಎಂದು ಮುಕ್ತ ಆಹ್ವಾನವನ್ನೂ ನೀಡುತ್ತಾರೆ.

ಹಾಸ್ಯದ ಟ್ರ್ಯಾಕ್‌ನಲ್ಲಿ ಪೋಷಕ ಪಾತ್ರಗಳಿಗೆ ಬಣ್ಣ ಹಚ್ಚಿ ಹಚ್ಚಿ ಸಾಕಾದ ಮೇಲೆ ತಾವೇ ನಾಯಕನಾದ ಈ ನಟನಿಗೆ ಈಗ ಮಾರುಕಟ್ಟೆಯ ಅರಿವಿದೆ. ಸೊಂಟದ ಕೆಳಗಿನ ಮಾತನ್ನು ಕೂಡ ಭಾವಾಭಿನಯದಲ್ಲೇ 'ಅಂಡರ್‌ಪ್ಲೇ' ಮಾಡುವ ಚಾಲಾಕಿತನವೂ ಇದೆ.

ಅರ್ಧ ಡಜನ್ ಚಿತ್ರಗಳ ನಾಯಕರಾದ ಮೇಲೂ ಹಣೆ ಮೇಲೆ ಅದೇ ವಿಭೂತಿ. ಅದೇ ಭಯ, ಅದೇ ಭಕ್ತಿ. ಸಿನಿಮಾ ಇನ್ನೂ ಮುಗಿದಿಲ್ಲ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68